# ಕಂಪ್ಯೂಟರ್ ಮಾಹಿತಿ

1. ಕಂಪ್ಯೂಟರ್ ಹಾರ್ಡ್ ವೇರ್ ಎಂದರೇ " ಕಂಪ್ಯೂಟರ್ ನ ಹೊರಗಡೆ ಮತ್ತು ಒಳಗಡೆ ಯಾವುದೇ ರೀತಿಯ , ಕಣ್ಣಿಗೆ ಕಾಣುವ ಬಿಡಿಭಾಗಗಳನ್ನು ಮತ್ತು ಇತರೆ ಜೋಡಣೆಗಳಾಗಿವೆ " .

2. ಕಂಪ್ಯೂಟರ್ ನ ಮಾನಿಟರ್ , ಮೌಸ್ , ಕೀಬೋರ್ಡ್ , ಪ್ರಿಂಟರ್ ಮತ್ತು ಸಿ.ಪಿ.ಯು ಒಳಗೆ ಇರುವ ಮದರ್ ಬೋರ್ಡ್ ಅಲ್ಲದೇ ಅದಕ್ಕೆ ಅಳವಡಿಸಿರುವ ಎಲ್ಲಾ ರೀತಿಯ ಚಿಪ್ ಗಳು , ರ್ಯಾಂ , ಪ್ರೋಸೆಸರ್ ಇವೆಲ್ಲವುಗಳನ್ನ ಹಾರ್ಡ್ ವೇರ್ ನ ಭಾಗಘಳಾಗಿವೆ .

3. ಹಾರ್ಡ್ ವೇರ್ ಗಳ ಸಂಯೋಜನೆಯ ಜೋತೆಗೆ ಪ್ರಿಂಟರುಗಳು , ಸ್ಕ್ಯಾನರ್ ಗಳು , ಮೋಡೆಂಗಳು , ಮತ್ತು ಇತರೆ ಉಪಕರಣಗಳು ಪೆರಿಫೆರಲ್ಸ್ ಅಥವಾ ಸುತ್ತುಉಪಕರಣಗಳು ಎಂದು ಕರೆಯುವರು .

4. ಕಂಪ್ಯೂಟರ್ ವ್ಯವಸ್ಥೆಯಲ್ಲಿ ಮೂಲತಃ 4 ಭಾಗಗಳು ಸೇರಿವೆ ಅವೆಂದರೇ 1. ಇನ್ ಪುಟ್ ಯೂನಿಟ್ , 2. ಔಟ್ ಪುಟ್ ಯೂನಿಟ್ 3. ಸ್ಟೋರೇಜ್ ಯೂನಿಟ್ , 4. ಸೆಂಟ್ರಲ್ ಪ್ರೊಸೆಸಿಂಗ್ ಯೂನಿಟ್ .

5. ಇನ್ ಪುಟ್ ವಸ್ತುಗಳು – ಕೀಬೋರ್ಡ್ , ಮೌಸ್ , ಮೈಕ್ರೋಫೋನ್ , ಸ್ಕ್ಯಾನರ್ , ವೆಬ್ ಕ್ಯಾಮೆರಾ ,

6. ಔಟ್ ಪುಟ್ ವಸ್ತುಗಳು – ಮಾನಿಟರ್ , ಪ್ರಿಂಟರ್ , ಸ್ಪೀಕರ್ , ಹೆಡ್ ಫೋನ್ .

7. ಸೀಡಿ ರೋಂ – ಒಂದು ಪ್ಲಾಪಿ ಡಿಸ್ಕ್ ಗಿಂತ 400 ಪಟ್ಟು ಹೆಚ್ಚು ಗಾತ್ರದ ಮಾಹಿತಿ ಅಥವಾ ಡೇಟಾ ಸಂಗ್ರಹಿಸಲು ಅನುವು ಮಾಡಿಕೊಂಡುವಂತಹ ಒಂದು ಟ್ರಾನ್ಸ ಫಾರಬಲ್ ಸ್ಟೋರೇಜ್ ಮೀಡಿಯಾ ಅಂದರೆ ವರ್ಗಾಯಿಸಬಲ್ಲ ಸಂಗ್ರಹಣಾ ಮಾಧ್ಯಮಕ್ಕೆ ಸೀಡಿ ರೋಂ ಎಂದು ಹೆಸರು.

8. ಡಿ.ವಿ.ಡಿ – ಡಿಜಿಟಲ್ ವರ್ಸಟೈಲ್ ಡಿಸ್ಕ್ .

9. ಸಿ.ಪಿ.ಯು – ಸೆಂಟ್ರಲ್ ಪ್ರೋಸೆಸಿಂಗ್ ಯೂನಿಟ್ .

10. ಕಂಟ್ರೋಲ್ ಯೂನಿಟ್ ಮತ್ತು ಅರಿತ್ ಮ್ಯಾಟಿಕ್ ಅಂಡ್ ಲಾಜಿಕ್ ಯೂನಿಟ್ ಎರಡನ್ನೂ ಸೇರಿಸಿ ಒಟ್ಟಾಗಿ ಸೆಂಟ್ರಲ್ ಪ್ರೋಸೆಸಿಂಗ್ ಯೂನಿಟ್ - ಸಿ.ಪಿ.ಯೂ ಎಂದು ಕರೆಯಲಾಗಿದೆ.

11. ಸಿ.ಪಿ.ಯು ಅನ್ನ ಕಂಪ್ಯೂಟರ್ ನ ಮಿದುಳು / ಹೃದಯ ಎಂದು ಕರೆಯಲಾಗಿದೆ.

12. ಯು.ಎಸ್.ಬಿ – ಯುನಿವರ್ಸಲ್ ಸೀರಿಯಲ್ ಬಸ್ ( ಇದನ್ನು ಮೌಸ್ , ಮೋಡೆಮ್ , ಕೀಬೋರ್ಡ್ ಅಥವಾ ಪ್ರಿಂಟರ್ ನಂತಹ ಬಾಹ್ಯ ಸಾಧನಗಳನ್ನು ಕಂಪ್ಯೂಟರಿಗೆ ಜೋಡಿಸಲು ಬಳಸಲಾಗುತ್ತದೆ.).

13. ಎಕ್ಸೆಲ್ ಅಪ್ಲಿಕೇಷನ್ ನ್ನ ಪ್ರವೇಶಿಸಿದಾಗ ಬುಕ್ 1 ಎಂಬ ಶೀರ್ಷಿಕೆಯನ್ನುಳ್ಳ ಹೊಸ ವರ್ಕ್ ಬುಕ್ ತೆರೆಯ ಮೇಲೆ ಕಾಣುತ್ತದೆ.

14. ಒಂದು ವರ್ಕ್ ಬುಕ್ ನಲ್ಲಿ ಮೂರು ಖಾಲಿ ವರ್ಕ್ ಶೀಟ್ ಗಳು ಇರುತ್ತವೆ

15. ಪ್ರತಿ ವರ್ಕ್ ಶೀಟ್ ನಲ್ಲಿ 65,536 ಅಡ್ಡ ಸಾಲುಗಳನ್ನು ಮತ್ತು 256 ಲಂಬಸಾಲುಗಳನ್ನು ಒಳಗೊಂಡಿರುತ್ತದೆ.

16. ಸೆಲ್ ಎಂದರೇ - ಒಂದು ಲಂಬ ಸಾಲು ಮತ್ತು ಅಡ್ಡ ಸಾಲು ಸಂಧಿಸುವ ಆಯತಾಕಾರ ಚೌಕಕ್ಕೆ ಸೆಲ್ ಎಂದು ಹೆಸರು

17. ಮೈಕ್ರೋಸಾಫ್ಟ್ ಎಕ್ಸೆಲ್ 2003 ಅನ್ನು ಆರಂಭಿಸುವ ವಿಧಾನ – ಸ್ಟಾರ್ಟ್ – ಪ್ರೋಗ್ರಾಮ್ – ಮೈಕ್ರೋಸಾಪ್ಟ್ ಎಕ್ಸೆಲ್ .

18. ಕನಿಷ್ಠಗೊಳಿಸುವುದು ಎಂದರೇ – ಮಿನಿಮೈಜ್ .

19. ಒಂದು ಹೊಸ ಫೈಲ್ ನ್ನ ಉಳಿಸ ಬೇಕೆಂದಿದ್ದರೆ - ಸೇವ್ ಆಸ್ ಕೊಟ್ಟು ನಂತರ ಫೈಲ್ ಹೆಸರು ಕೊಡಬೇಕು .

20. ನಮಗೆ ಮೈಕ್ರೋ ಸಾಫ್ಟ್ ಎಕ್ಸೆಲ್ ನಲ್ಲಿ ನಿರ್ದಿಷ್ಟವಾದ ಸೆಲ್ ಗೆ ಹೋಗ ಬೇಕು ಆಗ – ಸೆಲ್ ರೆಫರೆನ್ಸ್ ನಲ್ಲಿ ದಾಖಲಿಸಿ ಎಂಟರ್ ಬಟನ್ ಒತ್ತಿದರೆ ಸಾಕು ( ಉದಾ- ಜೆ100 ).

21. ಒಂದು ಸೆಲ್ ಬಲಕ್ಕೆ ಹೋಗಬೇಕಾದರೆ – ಬಲಬಾಣದ ಕೀಲಿ ಅಥವಾ ರೈಟ್ ಆರೋ .

22. ಒಂದು ಸೆಲ್ ಎಡಕ್ಕೆ ಬರಬೇಕಾದರೆ – ಎಡ ಬಾಣದ ಕೀಲಿ ಅಥವಾ ಲೆಫ್ಟ್ ಆರೋ.

23. ಒಂದು ಸೆಲ್ ಕೆಳಕ್ಕೆ ಹೋಗಬೇಕಾದರೆ – ಕೆಳ ಬಾಣದ ಕೀಲಿ ಅಥವಾ ಡೌನ್ ಆರೋ .

24. ಒಂದು ಸೆಲ್ ಮೇಲ್ಭಾಗಕ್ಕೆ ಹೋಗಬೇಕಾದರೆ – ಮೇಲು ಬಾಣದ ಕೀಲಿ ಅಥವಾ ಅಪ್ ಆರೋ .

25. ಪ್ರಸ್ತುತ ಪ್ರದೇಶದ ಬಲಬದಿಯ ಕೊನೆಗೆ ಹೋಗಲು – ಕಂಟ್ರೋಲ್ ಮತ್ತು ಬಲ ಬಾಣದ ಕೀಲಿ ಅಥವಾ ಕಂಟ್ರೋಲ್ ರೈಟ್ ಆರೋ .

26. ಪ್ರಸ್ತುತ ಪ್ರದೇಶದ ಎಡಬದಿಯ ಕೊನೆಗೆ ಹೋಗಲು – ಕಂಟ್ರೋಲ್ ಎಡ ಬಾಣದ ಕೀಲಿ ಅಥವಾ ಕಂಟ್ರೋಲ್ ಲೆಫ್ಟ್ ಆರೋ .

27. ಪ್ರಸ್ತುತ ಪ್ರದೇಶದ ಕೆಳಬದಿಯ ಕೊನೆಗೆ ಹೋಗಲು – ಕಂಟ್ರೋಲ್ ಕೆಳ ಬಾಣದ ಕೀಲಿ ಅಥವಾ ಕಂಟ್ರೋಲ್ ಡೌನ್ ಆರೋ.

28. ಪ್ರಸ್ತುತ ಪ್ರದೇಶದ ಮೇಲಿನ ಬದಿಯ ಕೊನೆಗೆ ಹೋಗಲು – ಕಂಟ್ರೋಲ್ ಮತ್ತು ಮೇಲು ಬಾಣದ ಕೀಲಿ ಅಥವಾ ಕಂಟ್ರೋಲ್ ಅಪ್ ಆರೋ.